

# ದೀಪಿಕಾ ದಿ ಗ್ರೇಟ್

ದೆಹಲಿಯ ಜೆಎನ್‌ಯು ನಲ್ಲಿ ಗೂಂಡಾಗಳ ದಾಳಿಯಿಂದ ಏಟು ತಿಂದ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಆಯಿಷ್ ಘೋಷ್ ಪರವಾಗಿ ಬಹಿರಂಗ ಬೆಂಬಲಕ್ಕೆ ನಿಂತ ದೀಪಿಕಾ ಈಗ ಬಾಲಿವುಡ್‌ನಲ್ಲಿ ಹೊಸ ಸಂಚಲನ ಮೂಡಿಸಿದ್ದಾಳೆ. ಒಂದೆಡೆ ಹೊಸ ಚಿತ್ರ 'ಛಪಾಕ್' ಬಿಡುಗಡೆಯಾಗಿದೆ. ಇಂತಹ ವಿವಾದದ ಸಂದರ್ಭದಲ್ಲಿ ಜೆಎನ್‌ಯು ಸಭೆಯಲ್ಲಿ ಭಾಗವಹಿಸಿದರೆ ಸಿನಿಮಾ ಕಲೆಕ್ಷನ್‌ಗೆ ಏಟು ಬೀಳಬಹುದು ಎಂದು ಕೆಲವರು ಸಲಹೆ ನೀಡಿದರೂ ದೀಪಿಕಾ ಅದ್ಯಾವುದನ್ನೂ ಲೆಕ್ಕಿಸದೆ ತನ್ನ ಮನಸ್ಸಿಗೆ ಸರಿ ಅನ್ನಿಸಿದ್ದನ್ನು ಮಾಡಿದ್ದಾಳೆ. ದೀಪಿಕಾಳ ಈ ದಿಟ್ಟ ನಡೆಗೆ ಬಾಲಿವುಡ್‌ನಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ. ಸೋನಾಕ್ಷಿ ಸಿನ್ಹಾ, ಶಬಾನಾ ಆಜ್ಮಿ, ಸ್ವರಾ ಭಾಸ್ಕರ್ ಮುಂತಾದವರು ದೀಪಿಕಾಗೆ ಬಹಿರಂಗ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ಮಧ್ಯೆ 'ಛಪಾಕ್' ಸಿನಿಮಾ ಮೊದಲ ದಿನವೇ ₹4.5 ಕೋಟಿ ಬಾಕ್ಸಾಫೀಸ್ ಕಲೆಕ್ಷನ್ ಮಾಡಿರುವುದು ದೀಪಿಕಾಳಿಗೆ ಉತ್ಸಾಹ ತಂದಿದೆಯಂತೆ. ಸಾಮಾನ್ಯವಾಗಿ ಹೀರೊಯಿನ್ ಮುಖ್ಯವಾಗಿರುವ ಸಿನಿಮಾಗಳು ಮೊದಲ ದಿನವೇ ಇಷ್ಟು ಹಣವನ್ನು ಬಾಚುವುದಿಲ್ಲ. ಈಗಿನ ಟ್ರೆಂಡ್ ನೋಡಿದರೆ, ಈ ಹಿಂದೆ ಕಂಗನಾ ನಟಿಸಿದ್ದ 'ಮಣಿಕರ್ಣಿಕಾ' ಚಿತ್ರದ ಕಲೆಕ್ಷನ್ ದಾಖಲೆಯನ್ನೂ 'ಛಪಾಕ್' ಹಿಂದಿಕ್ಕುವ ಸೂಚನೆಗಳಿವೆಯಂತೆ. ■

# ಬುದ್ಧಿವಂತೆ ಸಾರಾ

ಸೈಫ್ ಅಲಿ ಖಾನ್ ಮಗಳು ಸಾರಾ ಅಲಿ ಖಾನ್ ಸದಾ ಸುದ್ದಿಯಲ್ಲಿರುವ ನಟಿ. ಈ ವರ್ಷ ಈಕೆಗೂ ಕೈತುಂಬ ಕೆಲಸವಿದೆ. ಇಮ್ತಿಯಾಜ್ ಅಲಿ ನಿರ್ದೇಶಿಸಿರುವ 'ಆಜ್‌ಕಲ್' ಫೆಬ್ರುವರಿಯಲ್ಲಿ ಬಿಡುಗಡೆ ಕಾಣಲಿದೆ. ಅದರ ಬೆನ್ನಲ್ಲೇ ತಿಂಗಳು ಬಿಟ್ಟು 'ಬಾಗಿ–3' ಮತ್ತು 'ಕೂಲೀ ನಂಬರ್ ಒನ್' ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. ಸಾರಾ ಹೋದಲ್ಲಿ ಬಂದಲ್ಲಿ ಛಾಯಾಗ್ರಾಹಕರ ದಂಡೇ ಹಿಂಬಾಲಿಸುತ್ತಿರುವುದು ಆಕೆಯ ತಾರಾಮೌಲ್ಯವನ್ನೂ ಹೆಚ್ಚಿಸಿದೆ.

ಅಭಿಮಾನಿಗಳನ್ನು ಕಂಡರೆ ಸಾರಾಗೂ ತುಂಬ ಖುಷಿ. ಛಾಯಾಗ್ರಾಹಕರು ಮತ್ತು ಅಭಿಮಾನಿಗಳು ಎಷ್ಟು ಸಲ ಕೇಳಿದರೂ ಆಕೆ ಫೋಟೊ ಪೋಸ್ ಕೊಡಲು ಹಿಂಜರಿಯುವುದಿಲ್ಲ. ಕಳೆದ ವಾರ ಹೀಗೆಯೇ ಸಮಾರಂಭವೊಂದರಲ್ಲಿ ಛಾಯಾಗ್ರಾಹಕರಿಗೆ ಪೋಸ್ ಕೊಡುತ್ತಿದ್ದಾಗ ಗುಂಪಿನಿಂದ ಛಕ್ಕನೆ ನುಗ್ಗಿ ಬಂದ ಅಭಿಮಾನಿಯೊಬ್ಬ ಆಕೆಯ ಕೈಗೆ ಮುತ್ತು ಕೊಟ್ಟಿದ್ದಾನೆ. ಬೇರೆ ನಟಿಯರಾದರೆ ಗಾಬರಿ ಬೀಳುತ್ತಿದ್ದರು. ಸಾರಾ ಈ ಪ್ರಕರಣವನ್ನು ಬುದ್ಧಿವಂತಿಕೆಯಿಂದ ನಿಭಾಯಿಸಿದ್ದಾಳೆ ಎನ್ನುವುದು ಪತ್ರಕರ್ತರ ಮೆಚ್ಚುಗೆ. ಆ ಅಭಿಮಾನಿಯಿಂದ ಕೈ ಬಿಡಿಸಿಕೊಂಡು ಏನೂ ಆಗದವಳಂತೆ ನಗುತ್ತಲೇ ಸಾರಾ ಜಾಗ ಖಾಲಿ ಮಾಡಿದ್ದಾಳೆ. ವಿಷಯ ತಿಳಿದ ಬಳಿಕ ಅಪ್ಪ ಸೈಫ್ ಅಲಿ ಖಾನ್, ಮಗಳ ಬಾಡಿಗಾರ್ಡ್‌ಗಳ ಸಂಖ್ಯೆ ಹೆಚ್ಚಿಸಿದ್ದಾನಂತೆ. ■





# ಸೈಫ್‌ಗೆ ಖುಷಿಯ ವರ್ಷ



'ತಾನ್ಹಾಜೀ' ಮೊದಲ ದಿನವೇ ಬಾಕ್ಸ್ ಆಫೀಸ್‌ನಲ್ಲಿ ಕ್ಲಿಕ್ ಆಗಿದೆ. ಮೊದಲ ದಿನದ ಕಲೆಕ್ಷನ್ ರೂ. 14 ಕೋಟಿ ದಾಟಿರುವುದು ಅಜಯ ದೇವಗನ್ ಮತ್ತು ಸೈಫ್ ಅಲಿ ಖಾನ್ ಇಬ್ಬರಿಗೂ ಖುಷಿ ತಂದಿದೆ. ಅದರಲ್ಲೂ ಸೈಫ್ ಅಲಿ ಖಾನ್ ಪಾತ್ರದ ಬಗ್ಗೆ ವಿಮರ್ಶಕರು ಒಂದು ತೂಕ ಹೆಚ್ಚೇ ಮೆಚ್ಚಿಕೊಂಡಿದ್ದಾರೆ. ಚಿತ್ರ 100 ಕೋಟಿ ಕ್ಲಬ್ ಅತಿ ಕಡಿಮೆ ಅವಧಿಯಲ್ಲೇ ಸೇರುವ ನಿರೀಕ್ಷೆ ಹುಟ್ಟಿಸಿದೆ, ಚಿತ್ರದ ತಾಂತ್ರಿಕ ಶ್ರೀಮಂತಿಕೆಯ ಬಗ್ಗೆಯೂ ಹೆಚ್ಚು ಮುಚ್ಚುಗೆ ವ್ಯಕ್ತವಾಗಿದೆ. ಹಿಂದೆ ಶಾರೂಕ್‌ನ 'ರಾ ಒನ್' ಮತ್ತು ರಜನಿಕಾಂತ್‌ನ 'ರೋಬೊ' ಸಿನಿಮಾಗಳಲ್ಲಿ ಪ್ರೇಕ್ಷಕರಿಗೆ ಬೆರಗು ಹುಟ್ಟಿಸಿದ್ದ ತಂತ್ರಜ್ಞಾನದ ಬಳಕೆ ಈ ಚಿತ್ರದಲ್ಲಿ ಇನ್ನೊಂದು ಮಜಲನ್ನು ತಲುಪಿದೆ ಎಂದು ಬಾಲಿವುಡ್ ಪಂಡಿತರೆಲ್ಲ ಮನಸಾರೆ ಹೊಗಳಿದ್ದಾರೆ.

ಸೈಫ್ ಅಲಿ ಖಾನ್ ಪಾಲಿಗೆ ಹೊಸ ವರ್ಷದ ಆರಂಭ ಅತ್ಯುತ್ತಮವಾಗಿದೆ. ಇದೀಗ ಹೊಸ ವರ್ಷದ ಆತನ ಇನ್ನೊಂದು ಸಿನಿಮಾ 'ಜವಾನಿ ಜಾನೆಮನ್' ಫಸ್ಟ್ ಲುಕ್ ಬಗ್ಗೆ ಒಳ್ಳೆಯ ಮಾತುಗಳು ಕೇಳಿಬಂದಿವೆ. ಜನವರಿ ಕೊನೆಯ ದಿನವೇ ಈ ಸಿನಿಮಾ ಬಿಡುಗಡೆ ಆಗಲಿದೆಯಂತೆ. ನಿತಿನ್ ಕಕ್ಕರ್ ನಿರ್ದೇಶನದ ಈ ಸಿನಿಮಾದಲ್ಲಿ ಸೈಫ್ ಮತ್ತು ಟಬೂ ಪ್ರೇಕ್ಷಕರು ಬಿದ್ದು ಬಿದ್ದು ನಗುವಂತೆ ಅಭಿನಯಿಸಿದ್ದಾರೆ ಎನ್ನುವುದು ಚಿತ್ರತಂಡ ಹೇಳುತ್ತಿರುವ ಮಾತು.

2020ರಲ್ಲಿ ಸೈಫ್ ವರ್ಷ ಪೂರ್ತಿ ಬ್ಯುಸಿ ಎನ್ನುವುದರಲ್ಲಿ ಸಂಶಯವೇ ಇಲ್ಲ. ಈಗಾಗಲೆ ಸಹಿ ಹಾಕಿರುವ ಒಟ್ಟು ಆರು ಚಿತ್ರಗಳಿವೆ. 'ಬೂಟ್ ಪಾಲಿಶ್' ಫೆಬ್ರುವರಿಯಲ್ಲೇ ಬಿಡುಗಡೆಯಾಗಲಿದೆ. ಈ ಮಧ್ಯೆ ಕಮಲ ಹಾಸನ್ ನಿರ್ದೇಶನದ 'ತಲೈವನ್ ಇರುಕ್ಕಿಂಡ್ರಂ' ತಮಿಳು ಸಿನಿಮಾದಲ್ಲೂ ಸೈಫ್‌ಗೆ ಮಹತ್ವದ ಪಾತ್ರವಿದೆ. 'ದಿಲ್ ಬೇಚಾರಾ' ಮತ್ತು 'ಲವ್ ಆಜ್‌ಕಲ್2' ಸೈಫ್ ಭಾರೀ ನಿರೀಕ್ಷೆ ಇಟ್ಟುಕೊಂಡಿರುವ ಇನ್ನೆರಡು ಚಿತ್ರಗಳು.

■ ಬಿಂದು